**ಮಧ್ಯಕಾಲೀನ ಅರ್ಜಿ ಸಂಖ್ಯೆಃ 20 ರ ಆದೇಶದ ಮೇರೆಗೆ ಸಾಕ್ಷಿಯನ್ನು ದಿನಾಂಕ: 04-09-2024 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಹೆಚ್ಚುವರಿ ಮುಖ್ಯ ವಿಚಾರಣೆ :- ವಾದಿ ಪರ ವಕೀಲರಾದ ಶ್ರೀ ಬಿ.ಎಂ.ಬಿ. ರವರಿಂದಃ**

ಈ ಕೆಳಕಂಡ ದಾಖಲೆಗಳನ್ನು ಹಾಜರು ಮಾಡಿರುತ್ತೇನೆ.

1) ದಾವಾ ಜಮೀನಿಗೆ ಸಂಬಂಧಿಸಿದಂತೆ 20 ಪಹಣಿ ಪತ್ರಿಕೆಗಳು.

2) ಒಂದು ಕಂದಾಯ ಕಟ್ಟಿದ ರಶೀದಿ.

3) ಅಸಲು ದಾವಾ ಸಂಖ್ಯೆಃ 852/2008 ರ ಆದೇಶ ಪುಟಗಳ ದೃಢೀಕೃತ ನಕಲುಗಳು.

4) ವಿವಾದಾಂಶಗಳ ದೃಢೀಕೃತ ನಕಲನ್ನು ಹಾಜರು ಮಾಡಿರುತ್ತೇನೆ.

**ಸದರಿ ದಾಖಲೆಗಳನ್ನು ಕ್ರಮವಾಗಿ ನಿಪಿ-13 ರಿಂದ ನಿಪಿ-35 ಎಂದು ಗುರುತಿಸಲಾಯಿತು.**

5) ದಾವಾ ಜಮೀನಿನಲ್ಲಿ ನನ್ನ ತಂದೆ ಮತ್ತು ತಾಯಿಯ ಸಮಾದಿಗಳು ಇರುವ ಬಗ್ಗೆ ಎರಡು ಛಾಯಾ ಚಿತ್ರಗಳು ಮತ್ತು ಅವುಗಳ ಇಮೇಜ್ ಇರುವ ಸಿ.ಡಿ. ಯನ್ನು ಹಾಜರು ಮಾಡಿದ್ದೇನೆ. ಸಿ.ಡಿ. ಯು ಮುರಿದುಹೋಗಿರುವುದರಿಂದ ಛಾಯಾ ಚಿತ್ರಗಳ ಇಮೇಜ್ ಇರುವ ಮತ್ತೊಂದು ಸಿ.ಡಿ. ಯನ್ನು ಹಾಜರು ಮಾಡುವಂತೆ ತಿಳಿಸಿರುತ್ತದೆ.

**(**ವಾದಿ ಪರ ವಕೀಲರು ದಾಖಲೆಗಳನ್ನು ನಿಶಾನೆಗಳನ್ನಾಗಿ ಗುರುತಿಸಿಕೊಳ್ಳಲು ಕಾಲಾವಕಾಶ ಕೋರಿದ್ದರಿಂದ ಸಾಕ್ಷಿಯ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು**).**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ದೇವನಹಳ್ಳಿ.**